8, ಶ್ರೀ ಪಿ, ಪರಮೇಶ್ವರರಾವ್, ಹೊಸನಗರ, ,,
9. ಶ್ರೀ ಡಿ. ಸಿ, ಶಿವಪ್ಪಗೌಡ, ರಿಪ್ಪನ್‌ಪೇಟೆ, ,,
10. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ

ಸದರಿ ಕಾರ್ಯಕಾರಿ ಸಮಿತಿಯವರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ, ಆದರೆ ಸಂಘದ ಅಧ್ಯಕ್ಷರ ವಿರುದ್ಧ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆಯ ಕಲಂ 69ರ ಪ್ರಕಾರ ಕ್ರಮವನ್ನು ಕೈಗೊಳ್ಳಲಾಗಿದೆ.

ವಿಷಯ ; ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ದುರಾಡಳಿತ.

ಪ್ರ. ಸಂಖ್ಯೆ 502 (1566) ಶ್ರೀ ಬಂಕಿಲಹುಕ್ರಪ್ಪ (ಸುಳ್ಯ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

a. ಸೂಳ್ಯ ತಾಲ್ಲೂಕಿನಲ್ಲಿರುವ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಎಂಡೋಮೆಂಟ್ ಕಮೀಷನ್‌ರವರು 1983ನೇ ಇಸವಿ ಆಕ್ಟೋಬರ್ 23 ರಂದು ಭೇಟಿ ನೀಡಿದಾಗ ದೇವಸ್ಥಾನದ ಆಡಳಿತ ಮಂಡಳಿಯ ದುರಾಡಳಿತದ ಬಗ್ಗೆ ದೂರು ಕೊಟ್ಟಿದ್ದು ನಿಜವೆ ;

b. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

a. ಹೌದು.

b. ಇದರ ಬಗ್ಗೆ ಜಿಲ್ಲಾಧಿಕಾರಿ, ಮಂಗಳೂರು ಇವರಿಗೆ ತನಿಖೆಮಾಡಿ ವರದಿ ಸಲ್ಲಿಸಲು ಕೇಳಿದೆ. ಅವರಿಂದ ವರದಿ ಕಾಯಲಾಗಿದೆ.

ವಿಷಯ : ಕರ್ನಾಟಕ ವಿದ್ಯುತ್ ನಿಗಮ ನೌಕರರ ಕುರಿತು.

ಪ್ರ, ಸಂಖ್ಯೆ 503 (1290) ಶ್ರೀ ಟಿ. ತಿಮ್ಮಪ್ಪ ಹೆಗಡೆ(ಸಾಗರ).—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ, ಕರ್ನಾಟಕ ವಿದ್ಯುತ್ ನಿಗಮದ ನೌಕರರ ಸಂಘದವರು ಕಾಲ ನಿಗದಿತ ಬಡ್ತಿ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡದ ಬಗ್ಗೆ ಒತ್ತಾಯಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ, ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮವೇನು ;

ಇ, ಕುಶಲತೆಯುಳ್ಳ ಅನೇಕ ಕಾರ್ಮಿಕರು ಕೆಳದರ್ಜೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಮನಸ್ಸಿನಲ್ಲಿ ತಮ್ಮನ್ನು ಕಡೆಗಾಣಿಸಲಾಗಿದೆ ಎಂಬ ಭಾವನೆಬಂದಿದ್ದು ಅದು ನೌಕರ ವರ್ಗದ ಅಶಾಂತಿಗೆ ಕಾರಣವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ, ಪದವೀಧರರು ಹಾಗೂ ತಾಂತ್ರಿಕ ಶಿಕ್ಷಣ ತರಬೇತಿ ಹೊಂದಿದವರನ್ನು ಹೆಲ್ಪರ್ ಹುದ್ದೆಯಲ್ಲಿ ಮುಂದುವರಿಸಲಾಗುತ್ತಿದ್ದು ಅವರಿಗೆ ವಿದ್ಯಾರ್ಹತೆಗೆ ತಕ್ಕ ಕೆಲಸವನ್ನು ಕೊಡದೆ ಇರಲು ಕಾರಣಗಳೇನು ?

ಶ್ರೀ ಜೆ. ಎಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ, ಬಂದಿದೆ.

ಆ, 1982ರ ಡಿಸೆಂಬರ್ ತಿಂಗಳಿನಲ್ಲಿ ವಿದ್ಯುತ್ ನಿಗಮವು ತನ್ನ ನೌಕರರ ಸಂಘದೊಡನೆ ಕೈಗಾರಿಕಾ ವಿವಾದ ಕಾಯ್ದೆಯನ್ವಯ ಒಂದು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ, ಈ ಒಪ್ಪಂದವು 1985ರ ಡಿಸೆಂಬರ್ ತಿಂಗಳಿನ ಅಂತ್ಯದವರೆವಿಗೂ ಜಾರಿಯಲ್ಲಿರುವುದು. ಈ ಒಪ್ಪಂದದ ಪೂರ್ವಬಾವಿಯಾಗಿ ನಡೆದ ದ್ವಿಪಕ್ಷೀಯ ಚರ್ಚೆಯಲ್ಲಿ ಕಾಲನಿಗದಿತ ಬಡ್ತಿಯ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಕಾರ್ಮಿಕ ಕಮೀಷನ್‌ರವರ ಸಮ್ಮುಖದಲ್ಲಿ ಒಪ್ಪಂದವನ್ನು ಸಹಿ ಮಾಡುವ ಸಮಯದಲ್ಲಿ ಈ ಬೇಡಿಕೆಯನ್ನು ಕೈಬಿಡಲು ಒಪ್ಪಿಕೊಳ್ಳಲಾಯಿತು. ಈ ಬೇಡಿಕೆಯ ಪುನರ್‌ಪರಿಶೀಲನೆಯು ಹೆಚ್ಚಿನ ಆರ್ಥಿಕ ಹೊರೆಯನ್ನು ನಿಗಮಕ್ಕೆ ಉಂಟುಮಾಡುವುದರಿಂದ ಒಪ್ಪಂದ ಅವಧಿ ಮುಗಿಯುವ ತನಕ ಯಾವುದೇ ರೀತಿಯಲ್ಲಿ ಪುನರ್‌ಪರಿಶೀಲನೆ ಸೂಕ್ತವಾಗಿರುವುದಿಲ್ಲ.

ಈ, ಒಪ್ಪಂದದ ಇನ್ನೊಂದು ಮುಖ್ಯ ಅಂಶವೆಂದರೆ ವಿವಿಧ ಯೋಜನಾ ಸಿಬ್ಬಂದಿ ಘಟಕಗಳ ಸಂಯೋಜನೆ ಜಾರಿ ಮಾಡಿರುವುದರಿಂದ ಅವರ ಅನ್ವಯದಂತೆ ವಿವಿಧ ಯೋಜನೆಯಲ್ಲಿ ಖಾಲಿ ಇರುವ ಸ್ಥಾನಗಳನ್ನು ಕಾಳಿಯೋಜನೆಯಲ್ಲಿ ಹೆಚ್ಚುವರಿಯಾಗಿರುವ ಸಿಬ್ಬಂದಿಯಾಗಿ ವರ್ಗಾಯಿಸುವುದರ ಮೂಲಕ ಭರ್ತಿಮಾಡಲಾಗಿದೆ ಮತ್ತು ಯಾವ ಸ್ಥಾನಗಳೂ ಒಪ್ಪಂದದ ನಂತರ ಖಾಲಿ ಇರುವುದಿಲ್ಲ.

ಇ. ಕರ್ನಾಟಕ ವಿದ್ಯುತ್ ನಿಗಮವು ಸ್ವಯಂ ನಿಯಂತ್ರಿತ ಸಂಸ್ಥೆಯಾಗಿದ್ದು ಕಾರ್ಮಿಕ ವಿವಾದ ಮತ್ತು ಇತರೆ ಕಾಯ್ದೆಗೆ ಒಳಪಟ್ಟಿದೆ. ಆದ್ದರಿಂದ ಕಾರ್ಮಿಕರಿಗೆ ಸಂಬಂಧಿಸಿದ ಯಾವುದೇ ವಿವಾದವು ಈ ಕಾಯ್ದೆಯನ್ವಯ ತೀರ್ಮಾನವಾಗುತ್ತದೆ.

ಇ, ಮತ್ತು ಈ, ಸದರಿ ನೌಕರರಲ್ಲಿ ಬಹಳಷ್ಟು ನೌಕರರು ನೇಮಕಾತಿ ಸಮಯದಲ್ಲಿ ಯಾವುದಾದರೊಂದು ಉದ್ಯೋಗವನ್ನು ಹೊಂದುವ ಅಭಿಲಾಷೆಯೊಂದಿಗೆ ತಮ್ಮ ವಿದ್ಯಾರ್ಹತೆಯನ್ನು ಮುಚ್ಚಿಟ್ಟಿರಲಾಗಿದ್ದು ಈ ವಿಚಾರವನ್ನು ಕೆಲಸಕ್ಕೆ ಸೇರಿದ ನಂತರ ಬಹಿರಂಗಪಡಿಸುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಮತ್ತು ಉಳಿದವರಲ್ಲಿ ಕೆಲಸಕ್ಕೆ ನೇಮಕಾತಿ ಹೊಂದಿದ ನಂತರದಲ್ಲಿ ವಿದ್ಯಾರ್ಹತೆಯನ್ನು ಪಡೆದವರಾಗಿರುತ್ತಾರೆ. ಈ ಕಾರಣದಿಂದಾಗಿಯೇ ನಿಗಮದಲ್ಲಿ ಮೇಲ್ದರ್ಜೆಯ ಸ್ಥಾನಗಳನ್ನು ಭರ್ತಿ ಮಾಡುವ ಸಮಯದಲ್ಲಿ ಆ ಸ್ಥಾನಗಳಿಗೆ ಸೂಕ್ತವಾದ ಮತ್ತು ತಕ್ಕ ವಿದ್ಯಾರ್ಹತೆಯುಳ್ಳ ಕೆಳದರ್ಜೆಯ ನೌಕರರನ್ನೇ ಆರಿಸಿ ನೇಮಕಾತಿ ಮಾಡುವ ಕ್ರಮ ಜಾರಿಗೊಳಿಸಲಾಗಿದ್ದು ಈಗಾಗಲೇ ಬಹಳಷ್ಟು ನೌಕರರನ್ನು ಮೇಲ್ದರ್ಜೆಯ ಸ್ಥಾನಗಳಿಗೆ ನೇಮಿಸಲಾಗಿದೆ ಮತ್ತು ಈ ಕ್ರಮವನ್ನು ಮುಂದುವರಿಸಲಾಗಿದೆ.

ವಿಷಯ : ಸೇಡಂ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ರೈತರಿಗೆ ಪರಿಹಾರ ಒದಗಿಸುವುದು.

ಪ್ರ. ಸಂಖ್ಯೆ 504 (1569) ಶ್ರೀ ನಾಗರೆಡ್ಡಿ ಲಚಮಾರೆಡ್ಡಿ ಪಾಟೀಲ (ಸೇಡಂ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ, 1983–84 ರಲ್ಲಿ ಸೇಡಂ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಬೆಳೆಗಳು ನಾಶವಾಗಿ ರೈತರು ತೊಂದರೆಗೊಳಗಾದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ, ಅತೀವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಯಾವುದೇ ತರಹದ ಹಿಡುವಳಿ ಅನ್ವಯ ಮಾಡದೇ ಪರಿಹಾರ ಹಣ ಅಥವಾ ದೀರ್ಘಾವಧಿಯ ಸಾಲ ಸೌಲಭ್ಯವನ್ನು ಸರ್ಕಾರದಿಂದ ಒದಗಿಸಲಾಗಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ, ಹೌದು.

ಆ, ಇಲ್ಲ. ಸರ್ಕಾರವು ವಾರ್ಷಿಕ ವರಮಾನ ರೂ. 3500 ಕ್ಕಿಂತ ಕಡಿಮೆ ಇರುವ ಸುಮಾರು 200ಕ್ಕೂ ಹೆಚ್ಚಿನ ರೈತರಿಗೆ ಪರಿಹಾರ ನೀಡಿದೆ. ತಹಸೀಲ್ದಾರ್ ಸೇಡಂರವರಿಗೆ ರೂ. 1,20,000 ಹಣವನ್ನು ರೈತರಿಗೆ ಪರಿಹಾರ ನೀಡಲು ಬಿಡುಗಡೆ ಮಾಡಿದೆ.

ವಿಷಯ : ಪರಪನ ಹಳ್ಳಿಯಲ್ಲಿರುವ ಈಚಲ ಮರಗಳು

ಪ್ರ. ಸಂಖ್ಯೆ 505 (1214) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ, ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಈಚಲ ಮರಗಳ ಸಂಖ್ಯೆ ಎಷ್ಟು ಮತ್ತು ಇವುಗಳಿಂದ ದಿನ ಒಂದಕ್ಕೆ ಉತ್ಪತ್ತಿಯಾಗುತ್ತಿರುವ ಹೆಂಡದ ಪ್ರಮಾಣವೆಷ್ಟು ? ಅಂಕಿ ಅಂಶಗಳನ್ನು ಕೊಡುವುದು?

ಶ್ರೀ ಜೆ. ಹೆಚ್. ಪಟೀಲ್ (ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ, ಹರಪನಹಳ್ಳಿ ತಾಲ್ಲೂಕಿನಲ್ಲಿ 1983–84ನೇ ಸಾಲಿನಲ್ಲಿ 2600 ಈಚಲು ಮರಗಳಿಂದ ದಿನ ಒಂದಕ್ಕೆ ಸುಮಾರು 650 ಲೀಟರಿನಷ್ಟು ಶೇಂದಿಯನ್ನು ಉತಾರು ಮಾಡಲಾಗಿದೆ.

ವಿಷಯ : ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಪರಿಮಿತಿಗೊಳಪಟ್ಟಿರುವ ದೇವಸ್ಥಾನಗಳು

ಪ್ರ. ಸಂಖ್ಯೆ 508 (1665) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ, ಹಿಂದಿನ ಸರ್ಕಾರದವರು ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ಮಾಸಿಕ ವೇತನ 100 ರೂ. ಮಾಡುವುದಾಗಿ ಭರವಸೆ ನೀಡಿದ್ದು ನಿಜವೆ ;

ಆ, ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಕೊಂಡ ಕ್ರಮ ಏನು ;

ಇ, ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನ ಮತ್ತು ಮಠಗಳ ಸಂಖ್ಯೆ ಎಷ್ಟು ;

ಈ, ಸದರಿ ದೇವಸ್ಥಾನ ಮತ್ತು ಮಠಗಳಿಗೆ ನೀಡುವ ತಸ್ತೀಕು ಮೊತ್ತವನ್ನು ಇತ್ತೀಚಿನ ಬೆಲೆ ಗನುಗುಣವಾಗಿ ನೀಡಲಾಗುತ್ತಿದೆಯೆ ?

ಶ್ರೀ ವಿ. ಎಲ್. ಪಾಟೀಲ್ (ಮಾನ್ಯ ಕಂದಾಯ ಮಂತ್ರಿಯವರು).—

ಅ, ಈ ಬಗ್ಗೆ ದಾಖಲೆ ಕಂಡು ಬಂದಿಲ್ಲ.

ಆ, ಉದ್ಭವಿಸುವುದಿಲ್ಲ.

ಇ, ದೇವಸ್ಥಾನಗಳು 35,844
ಮಠಗಳು 1,145